ಮಾಡಿಕೊಡು' ಎಂದಾಗಲೀ, 'ಹಲಶಿನ್ಕಾಯಿ ಬೆಳದಿದೆ. ಎಂತಾರೂ ಮಾಡ್ತೀರೇನೆ?' ಎನ್ನುತ್ತಲೋ, 'ಶಾಲೆ ಪಕ್ಕದಲ್ಲಿ ಚೊಲೊ ನೇರಳೆ ಹಣ್ಣಿನ ಮರಯಿದೆ. ನಿಮ್ ಹುಡುಗ್ರನ್ ಕರ್ಕ ಹೋಗೆ' ಎಂದೆಲ್ಲಾ ವಾಗಾತಿ ಮಾಡುತ್ತಿದ್ದಳು. 'ಗದ್ದೆಯ ಅವಳೆಲ್ಲಿ (ಕಾಲುವೆಯಲ್ಲಿ) ದುಂಡಗೆ ಆಡ್ತ ಆ ಹುಡುಗ್ರು. ಶೀತಾದ್ರೆ ದೇವ್ರೆ ಕಾಯವ್ವ' ಎಂದು ಕನಿಕರಿಸುತ್ತಿದ್ದಳು. 'ಹೋದೊರ್ಷದ ಹಪ್ಪಳ, ಉಪ್ಪಿನಕಾಯಿ ಇದ್ದು ಒಂದಿಷ್ಟು. ಆ ಬಿಡಾರಕ್ಕೇ ಕೊಟ್ರೂ ಆತು' ಎಂದು ಲೆಕ್ಕ ಹಾಕುತ್ತಿದ್ದಳು. ಇದನ್ನೆಲ್ಲಾ ಕಂಡು ದೇವಿಯ ಬಾಯಿಗೆ ಪುರುಸೊತ್ತೇ ಇಲ್ಲ. ಎಲ್ಲರ ಬಳಿ ಹೇಳಿದ್ದೂ ಹೇಳಿದ್ದೆ, ನಕ್ಕಿದ್ದೂ ನಕ್ಕಿದ್ದೆ.

★★★

ಶಿವಮ್ಮನನ್ನೂ ಕಂಡಷ್ಟೂ, ಒಡನಾಡಿದಷ್ಟೂ ಗಂಗಕ್ಕನ ಸೋಜಿಗ ಹೆಚ್ಚುತ್ತಿತ್ತು. ಇರುವ ಒಂದು ಜೀವಕ್ಕೆ ಕೊರತೆಯಾಗದಷ್ಟಿದೆ ತನ್ನ ಬಳಿ. ಯಾರ ಜವಾಬ್ದಾರಿಯೂ ಇಲ್ಲ. ಯಾವ ತಾಪತ್ರಯವೂ ಇಲ್ಲ. ಆದರೂ ಶಿವಮ್ಮನ ನಿರುಮ್ಮಳ ನಗೆ ತನಗೇಕೆ ಒಗಟಾಗಿದೆ? ಸಮೃದ್ಧಿ ಇಲ್ಲದೆಯೂ ಅವಳಲ್ಲಿ ಅದು ಹೇಗೆ ಸಂತೃಪ್ತಿಯಿದೆ? ತನ್ನ ಮಕ್ಕಳು ಮೊಮ್ಮಕ್ಕಳು ಬಂದಾಗೆಲ್ಲಾ ಅವರ ವರ್ತನೆಯಿಂದ

